ಆ) ಈ ಕಾಮಗಾರಿಗಾಗಿ ವೆಚ್ಚ ಮಾಡಿದ ಹಣವೆಷ್ಟು. ಮತ್ತು ಅದರ ಕೆಲಸ ಯಾವ ಹಂತದಲ್ಲಿದೆ?

ಇ) ಈ ಕಾಮಗಾರಿ ಕೆಲಸದಲ್ಲಿ ಅವ್ಯವಹಾರ ನಡೆದಿದೆ ಎಂದು ಸಾರ್ವಜನಿಕರಿಂದ ದೂರು ಏನಾದರೂ ಬಂದಿದೆಯೇ, ಬಂದಿದ್ದಲ್ಲಿ ತನಿಖೆ ಮಾಡಲಾಗುವುದೇ?

ಈ) ಈ ಕಾಮಗಾರಿ ಕೆಲಸವನ್ನು ಎಷ್ಟು ದಿನಗಳಲ್ಲಿ ಪೂರೈಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸದ್ಯಕ್ಕೆ ಮಂಜೂರಾಗಿರುವ 17.425 ಕಿ.ಮೀ. ರಸ್ತೆಯ ಮಣ್ಣಿನ ಮತ್ತು ಸಿ.ಡಿ. ಕೆಲಸಗಳನ್ನು ಜುಲೈ 87ರಲ್ಲೂ ಹಾಗೂ ಜಲ್ಲಿ ಡಾಂಬರು ಕೆಲಸವನ್ನು 90ರಲ್ಲಿ ಪ್ರಾರಂಭಿಸಲಾಯಿತು.

ಆ) ಈ ಕಾಮಗಾರಿಗೆ ಈವರೆಗೆ ಸುಮಾರು 350 ಲಕ್ಷ ರೂ.ಗಳ ವೆಚ್ಚವಾಗಿರುತ್ತದೆ. ಮಣ್ಣಿನ ಮತ್ತು ಸಿ.ಡಿ. ಕೆಲಸಗಳು ಮುಗಿದಿದ್ದು, ಜಲ್ಲಿ ಮತ್ತು ಡಾಂಬರು ಕೆಲಸದ ಗುತ್ತಿಗೆದಾರರು ಕೆಲಸವನ್ನು ಪೂರೈಸದ ಕಾರಣ ಗುತ್ತಿಗೆಯನ್ನು ಡಿಸೆಂಬರ್ 91ರಲ್ಲಿ ರದ್ದುಗೊಳಿಸಿ ಇಲಾಖಾವತಿಯಿಂದ ತೆಗೆದುಕೊಳ್ಳಲಾಗಿದ್ದು, ಪ್ರಗತಿಯಲ್ಲಿದೆ. ಕೆಲವು ತಾಂತ್ರಿಕ ಅಡಚಣೆಗಳಿಂದ ಕೆಲಸ ಸ್ವಲ್ಪ ನಿಧಾನವಾಗಿದ್ದು, ಭಾರತ ಸರ್ಕಾರದ ಭೂಸಾರಿಗೆ ಇಲಾಖೆಯಿಂದ, ಒಪ್ಪಿಗೆ ಬಂದ ನಂತರ ಕೆಲಸವನ್ನು ಅದಷ್ಟು ಜಾಗ್ರತೆಯಾಗಿ ಮುಗಿಸಲಾಗುವುದು.

ಇ) ಇಂತಹ ದೂರುಗಳು ಯಾವೂ ಬಂದಿಲ್ಲ.

ಈ) ಡಿಸೆಂಬರ್ 93ರ ವೇಳೆಗೆ ಮುಗಿಸುವ ಕಾರ್ಯಕ್ರಮ ಇದೆ.

ವರದಾ ನದಿಗೆ ಸೇತುವೆ ಕಟ್ಟಲು ಸುಂಕ ವಸೂಲಿ

516 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಹಾವೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಕುಣಿಮಲ್ಲಿ ಹಳ್ಳಿಯಲ್ಲಿ ವರದಾ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಕಾಮಗಾರಿ ಯಾವಾಗ ಪೂರ್ಣಗೊಂಡಿತು ಮತ್ತು ಇದಕ್ಕೆ ಖರ್ಚಾದ ಹಣವೆಷ್ಟು?

ಆ) ಈ ಮೇಲ್ಕಂಡ ಸೇತುವೆ ನಿರ್ಮಾಣಕ್ಕೆ ಖರ್ಚಾದ ಹಣವನ್ನು ಸರ್ಕಾರ ಸೇತುವೆ ಮೇಲೆ ಓಡಾಡುವ ವಾಹನಗಳಿಂದ ತೆರಿಗೆ ರೂಪದಲ್ಲಿ ವಸೂಲಿ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ತೆರಿಗೆ ಹಣ ವಸೂಲಾಗಿದೆ?

ಈ) ಈ ತೆರಿಗೆ ಹಣ ವಸೂಲು ಮಾಡಲು ಸರ್ಕಾರವು ಯಾರಿಗೆ ಗುತ್ತಿಗೆ ನೀಡಿದೆ ಹಾಗೂ ಈ ಗುತ್ತಿಗೆಯ ಅವಧಿ ಯಾವಾಗ ಮುಗಿಯುವುದು?

ಉ) ಈ ಮೇಲ್ಕಂಡ ಗುತ್ತಿಗೆದಾರರು ಸರ್ಕಾರ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಂಡು ಕೂಡಲೇ ನಿಗದಿಪಡಿಸಿದ ದರಗಳನ್ನು ವಸೂಲಿ ಮಾಡುವಂತೆ ಸುತ್ತೋಲೆ ಹೊರಡಿಸುವುದೇ ಮತ್ತು ಹೀಗೆ ವಸೂಲು ಮಾಡುತ್ತಿರುವ ಪದ್ದತಿ ಎಂದಿಗೆ ಕೊನೆಗೊಳ್ಳುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಸೇತುವೆ ಹಾಗೂ ಕೂಡು ರಸ್ತೆಗಳ ನಿರ್ಮಾಣ ಕಾಮಗಾರಿಯನ್ನು ಜೂನ್ 1990ರಲ್ಲಿ ಪೂರ್ಣಗೊಳಿಸಲಾಯಿತು. ಈ ಕಾಮಗಾರಿಗೆ 2,14,38,634-00 ರೂ.ಗಳು ವೆಚ್ಚವಾಗಿವೆ.

ಆ) ಹೌದು.

ಇ) 1992ರ ನವೆಂಬರ್ ತಿಂಗಳಿನ ಅಂತ್ಯದವರೆಗೆ 2,21,78,594-00ರೂ.ಗಳು ವಸೂಲಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ 6-7-92ರಿಂದ ಈ ಸೇತುವೆಯ ಮೇಲೆ ತೆರಿಗೆ ಹಣ ವಸೂಲು ಮಾಡಲು ಶ್ರೀ ಎನ್.ಹೆಚ್. ಕೋನರೆಡ್ಡಿ, ಗುತ್ತಿಗೆದಾರರು, ಚಿಲಕವಾಡ, ನವಲಗುಂದ ಇವರಿಗೆ ಗುತ್ತಿಗೆ ನೀಡಲಾಗಿದೆ. ಈ ಗುತ್ತಿಗೆಯ ಅವಧಿಯು 31-3-93ರಂದು ಮುಗಿಯುತ್ತದೆ.

ಉ) ಈ ತರಹದ ಪ್ರಕರಣಗಳು ಈವರೆವಿಗೂ ವರದಿಯಾಗಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಮತೀರ್ಥ ಹೊಳೆಗೆ ಕಟ್ಟಿದ ಸೇತುವೆ ಕೊಚ್ಚಿ ಹೋಗಿರುವ ಬಗ್ಗೆ

519 - ಶ್ರೀಮತಿ ಸುಮಾವಸಂತ (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕು, ಶ್ರೀಮಂಗಲ ಮಂಡಲ ವ್ಯಾಪ್ತಿಗೆ ಬರುವ ಹೇರ್ಡಾಡು ದೇವಸ್ಥಾನದ ಪಕ್ಕ ರಾಮತೀರ್ಥ ಹೊಳೆಗೆ ಕಟ್ಟಿದ ಸೇತುವೆಯ ಎರಡೂ ಬದಿ ಮಳೆಗೆ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಕಾಮಗಾರಿ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ರಾಮತೀರ್ಥ ಹೊಳೆಗೆ ಹೆರ್ಡಾಡು ದೇವಸ್ಥಾನದ ಬಳಿ ಇರುವ ಸೇತುವೆಯ ಎರಡೂ ಬದಿಗಳಿಗೆ ಅತಿವೃಷ್ಟಿಯಿಂದ ಸುಮಾರು 50,000 ರೂ.ಗಳಷ್ಟು ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಚಾರಕ್ಕೆ ತೊಂದರೆ ಆಗದಂತೆ ಕಾರ್ಯ ನಿರ್ವಹಿಸಲಾಗಿದ್ದು, ಅತಿವೃಷ್ಟಿ ಪರಿಹಾರ ಅನುದಾನ ದೊರೆತನಂತರ ಸಂಪೂರ್ಣ ದುರಸ್ತಿ ಮಾಡಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಿರಾ ನೆಲ್ಲಿಗೆರೆ ರಸ್ತೆಯಲ್ಲಿರುವ ಸೇತುವೆ ದುರಸ್ತಿ

557 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಬೆಳ್ಳಾರ ಗ್ರಾಮದ ಸಿರಾ-ನೆಲ್ಲಿಗೆರೆ ರಸ್ತೆಯಲ್ಲಿರುವ ಸೇತುವೆಯು ಅಪಾಯದ ಅಂಚಿನಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದರ ದುರಸ್ತಿಗಾಗಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?